**ದಿವಾಣಿ ನ್ಯಾಯಾಲಯ ಮತ್ತು ಜೆ. ಎಮ್. ಎಫ್. ಸಿ. ನ್ಯಾಯಾಲಯ**
**ಜೇವರ್ಗಿ**

**ಸಿಸಿ ನಂ. 1742/2021**

**ಚಾಸಾ-1 /ಪಿಡಬ್ಲೂ-1**

| | |
|---|---|
| **ಹೆಸರು** | ಲಾಲಸಾಬ |
| **ತಂದೆ ಹೆಸರು** | ಲಾಳೆಸಾಬ ಅಡಗಿನಮನಿ |
| **ವಯಸ್ಸು** | 42 ವರ್ಷ |
| **ಉದ್ಯೋಗ** | ಒಕ್ಕಲುತನ |
| **ವಾಸ ಸ್ಥಳ** | ಯಡ್ರಾಮಿ |

**ದಿನಾಂಕ 06-07-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರಿಂದ:**

ಚಾಸಾ-4 ನನ್ನ ತಂದೆ. ಚಾಸಾ-5 ರ ಪರಿಚಯವಿದೆ. ಆರೋಪಿಗಳು ನನ್ನ ಅಣ್ಣ-ತಮ್ಮಂದಿರು.

5 ವರ್ಷಗಳ ಹಿಂದೆ ಮಧ್ಯಾಹ್ನ 1-30 ಗಂಟೆಗೆ ಯಡ್ರಾಮಿಯ ಸನಂ.257 ರಲ್ಲಿ ಬದುವಿಗೆ ಬೆಳೆದ ಮುಳ್ಳಿನ ಕಂಟಿಯನ್ನು ಕಡಿಯಿರಿ ಎಂದು ಹೇಳಿದಾಗ 2 ಮತ್ತು 3ನೇ ಆರೋಪಿತರು ಕೈಯಿಂದ ಬೆನ್ನಿಗೆ ಹೊಡೆದಿರುತ್ತಾರೆ. 1ನೇ ಆರೋಪಿತನು ಕಾಲಿನಿಂದ ಟೊಂಕಕ್ಕೆ ಒದ್ದಿರುತ್ತಾನೆ. ನಂತರ ಚಾಸಾ-4 ರವರು ಬಂದು ಜಗಳ ಬಿಡಿಸಿರುತ್ತಾರೆ. ಆರೋಪಿತರೆಲ್ಲರೂ ಕೂಡಿ ಇನ್ನೊಮ್ಮೆ ಕಂಟಿ ವಿಚಾರವಾಗಿ ಬಂದರೆ ಹೊಡೆದು ಖಲಾಸ ಮಾಡುತ್ತೇವೆ ಎಂದು ಜೀವ ಬೆದರಿಕೆ ಹಾಕಿರುತ್ತಾರೆ. ನಂತರ ನಾನು ಪೊಲೀಸ ಠಾಣೆಗೆ ಹೋಗಿ ದೂರು ನೀಡಿರುತ್ತೇನೆ. ನಂತರ ಪೊಲೀಸರು ಜಗಳವಾದ ದಿವಸ ದೂರನ್ನು ತೆಗೆದುಕೊಂಡಿರುವುದಿಲ್ಲ. ನಂತರ ಮರು ದಿವಸ ಪೊಲೀಸರು ದೂರನ್ನು ಸ್ವೀಕರಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಸ.ಸ.ಅರವರು ಅನುಮತಿಯುನ್ನ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ವಾಟೀ ಸವಾಲುಃ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿನಾಂಕ 19.09.2021 ರಂದು ಜಗಳವಾಗಿರುತ್ತದೆ ಎಂದರೆ ಸರಿ. 1ನೇ ಆರೋಪಿತನು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾನೆ ಎಂದರೆ ಸರಿ . ನಾನು ಆಗ ಓಡಿ

ಹೋರಟಿದ್ದಾಗ 2 ಮತ್ತು 3ನೇ ಆರೋಪಿತರು ನನ್ನನ್ನು ತಡೆದು ನಿಲ್ಲಿಸಿರುತ್ತಾರೆ ಎಂದರೆ ಸರಿ . ದಿನಾಂಕ 24.09.2021 ರಂದು ಪೊಲೀಸರು ನಾನು ತೋರಿಸಿದ ಗುನ್ನೆ ಸ್ಥಳದಲ್ಲಿ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ .

**<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ</u>**

ನಾನು 7ನೇ ತರಗತಿಯವರೆಗೆ ಶಾಲೆ ಕಲಿತಿರುತ್ತೇನೆ. ಸನಂ. 257 ಒಟ್ಟು 28 ಎಕರೆ 35 ಗುಂಟೆ ಜಮೀನು ಇರುತ್ತದೆ. ಸದರಿ ಜಮೀನಿನ ಬಗ್ಗೆ ನಾನು ನನ್ನ ಫಿರ್ಯಾದಿಯಲ್ಲಿ ಬರೆದಿಲ್ಲ. ಆರೋಪಿತರು ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ ನಿಮ್ಮ ವಿರುದ್ದ ಸಿವಿಲ್ ದಾವೆ ಸಲ್ಲಿಸಿರುತ್ತಾರೆ ಎಂದರೆ ಸರಿ. ಆರೊಪಿತರು ನಿಮ್ಮ ವಿರುದ್ದ 2 ಎಕರೆ 10 ಗುಂಟೆ ಜಮೀನು ಅತೀಕ್ರಮಣ ಮಾಡಿರುತ್ತಿರಿ ಎಂದು ಕೇಸು ಹಾಕಿರುತ್ತಾರೆ ಎಂದರೆ ಸಾಕ್ಷಿಯು ಆರೋಪಿತರು ನಮಗೇ ಇನ್ನು 3 ಎಕರೆ ಜಮೀನು ಕೊಡಬೇಕೆಂದು ಹೇಳುತ್ತಾರೆ. ಜಗಳವಾದ ದಿನಾಂಕ , ತಿಂಗಳು , ವರ್ಷ ಹೇಳಲು ಬರುವುದಿಲ್ಲ. ನಾನು ಜಗಳವಾದ ದಿನವೇ ಪೊಲೀಸ ಠಾಣೆಗೆ ಹೋಗಿರುತ್ತೇನೆ. ಫಿರ್ಯಾದಿಯನ್ನು ನಾನೇ ಕೈಯಿಂದ ಬರೆದು ನೀಡಿರುತ್ತೇನೆ. ಯಾವುದೇ ಜಗಳ ಆಗಿಲ್ಲ ಎಂದರೆ ಸರಿಯಲ್ಲ. ನಾವೇ ಆರೋಪಿತರೊಂದಿಗೆ ಜಗಳ ತೆಗೆದಿರುತ್ತೇವೆ ಎಂದರೆ ಸರಿಯಲ್ಲ. ಆರೋಪಿತರ ವಿರುದ್ದ ಸುಳ್ಳು ದೂರನ್ನು ನೀಡಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ.ಸರಿ.ಇದೆ.

ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳು
ಜೇವರ್ಗಿ